# ನ್ಯೂರೋಪ್ರೊಸ್ಟೆಟಿಕ್

## ಮೆದುಳು ಸಂಕೇತಗಳ ಡಿಕೋಡ್ ಸಾಧನ!




■ **ಶಶಿಕುಮಾರ್ ಸಿ.**

ಪಾರ್ಶ್ವವಾಯು ಕಾಯಿಲೆಗೆ ತುತ್ತಾದವರ ಪೈಕಿ ಬಹುತೇಕರು ತಮ್ಮ ಮಾತಿನ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಅಂಥವರ ಅನುಕೂಲಕ್ಕೆಂದು ಸ್ಯಾನ್ ಫ್ರಾನ್ಸಿಸ್ಕೊ ಮತ್ತು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಗಳ ಸಂಶೋಧನಾ ತಂಡವೊಂದು ವಿಶೇಷ ಸಾಧನವನ್ನು ಅಭಿವೃದ್ಧಿಪಡಿಸಿದೆ. ಆ ಸಾಧನದ ಮೂಲಕ ಮೆದುಳಿನ ಸಂಕೇತಗಳನ್ನು ಡಿಕೋಡ್ ಮಾಡುವ ಸಂಶೋಧನೆ ಕೈಗೊಂಡು ಅದರಲ್ಲಿ ಯಶಸ್ವಿಯೂ ಆಗಿದ್ದಾರೆ.

ಪಾರ್ಶ್ವವಾಯು ಕಾಯಿಲೆಗೆ ತುತ್ತಾಗಿ ಮಾತನಾಡಲು ಸಾಧ್ಯವಾಗದ ವ್ಯಕ್ತಿಯ ಮೆದುಳಿನ ಸಂಕೇತಗಳ ಪತ್ತೆಗೆ ಎಲೆಕ್ಟ್ರೋಡ್‌ಗಳನ್ನು ಒಳಗೊಂಡ ವಿಶೇಷ 'ನ್ಯೂರೊಪ್ರೊಸ್ಟೆಟಿಕ್' ಎಂಬ ಸಾಧನವನ್ನು ತಂಡವು ಅಭಿವೃದ್ಧಿಪಡಿಸಿದೆ. ಅದನ್ನು ಪಾರ್ಶ್ವವಾಯು ಪೀಡಿತ ವ್ಯಕ್ತಿಯ ಮೇಲೆ ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಲಾಗಿದೆ.

2003ರಲ್ಲಿ ವ್ಯಕ್ತಿಯೊಬ್ಬರು (ಹೆಸರನ್ನು ಬಹಿರಂಗ ಪಡಿಸಿಲ್ಲ) ಅಪಘಾತಕ್ಕೀಡಾಗಿದ್ದರು. ಆಗ ಅವರ ಮೆದುಳಿಗೆ ಸ್ಟ್ರೋಕ್ ಆಗಿತ್ತು. ಆಗ ಪಾರ್ಶ್ವವಾಯುಗೆ ತುತ್ತಾದ ಅವರು ಮಾತನಾಡುವ ಶಕ್ತಿಯನ್ನೇ ಕಳೆದುಕೊಂಡರು. ಸಂಶೋಧನಾ ತಂಡವು ಆ ವ್ಯಕ್ತಿಯನ್ನು ತಮ್ಮ ಸಂಶೋಧನೆಗೆ ಬಳಸಿಕೊಂಡಿತು.

ಪರೀಕ್ಷಾರ್ಥಿಯ ಮೆದುಳಿನ ಸಂಕೇತಗಳ ಪತ್ತೆಗೆ ಎಲೆಕ್ಟ್ರೋಡ್‌ಗಳನ್ನು ಒಳಗೊಂಡ ನ್ಯೂರೊಪ್ರೊಸ್ಟೆಟಿಕ್ ಸಾಧನವನ್ನು ಆತನ ತಲೆಯ ಎಡಭಾಗದಲ್ಲಿ (ಮಾತನಾಡುವ ಪ್ರಕ್ರಿಯೆಗೆ ಪೂರಕವಾಗಿ ಸ್ಪಂದಿಸುವ ಭಾಗ) ಇರಿಸಲಾಗಿತ್ತು. ಬಳಿಕ ನಾಲ್ಕು ತಿಂಗಳವರೆಗೆ 50 ತರಬೇತಿ ಕಾರ್ಯಾಗಾರಗಳನ್ನು ಕೈಗೊಂಡು ಪ್ರತ್ಯೇಕ ಪದಗಳನ್ನು ಹೇಳಲು, ವಾಕ್ಯಗಳನ್ನು ರಚಿಸಲು, ಡಿಸ್‌ಪ್ಲೇ ಸ್ಕ್ರೀನ್‌ನಲ್ಲಿ ಕಾಣುವ ಪ್ರಶ್ನೆಗಳಿಗೆ ಉತ್ತರಿಸಲು ರೋಗಿಗೆ ಪ್ರೇರೇಪಿಸಲಾಯಿತು.

ಸಂಶೋಧಕರು ಕೇಳಿದ ಪ್ರಶ್ನೆಗಳಿಗೆ ರೋಗಿಯು ಉತ್ತರಿಸಲು ಮುಂದಾಗುತ್ತಾನೆ. ಆದರೆ ಮಾತನಾಡಲು ಆಗುವುದಿಲ್ಲ. ಅಂತಹ ಸಂದರ್ಭದಲ್ಲಿ ಈ ಸಾಧನವು ರೋಗಿಯ ಮೆದುಳಿನ ನರಗಳ ಚಟುವಟಿಕೆಯನ್ನು ಗ್ರಹಿಸಿ ಏನು ಹೇಳಬಯಸುತ್ತಿದ್ದಾನೆಯೋ ಅದನ್ನು ಕಸ್ಟಮ್ ತಂತ್ರಾಂಶದ ಮೂಲಕ ಕಂಪ್ಯೂಟರ್‌ಗೆ ವರ್ಗಾಯಿಸುತ್ತದೆ. ಹೀಗೆ ವರ್ಗಾಯಿಸಿದ ಮಾಹಿತಿಯು ಕಂಪ್ಯೂಟರ್ ಪರದೆ ಮೇಲೆ ಅಕ್ಷರ ರೂಪದಲ್ಲಿ ಕಾಣುತ್ತದೆ. ಮಾತನಾಡದ ವ್ಯಕ್ತಿಗಳ ಸಂವಹನಕ್ಕೆ ನೆರವಾಗುವ ದೃಷ್ಟಿಯಿಂದ ಈ ಸಂಶೋಧನಾ ವರದಿಯು ಮಹತ್ವದ್ದೆನಿಸಿದೆ.

ಮಿತ ಭಾಷಿಗಳು, ಮಾತನಾಡಲು ಬಾರದವರು ಬೇರೊಬ್ಬರೊಂದಿಗೆ ಸಂವಹನ ನಡೆಸಲು ಸಹಾಯಕ ಸಾಧನಗಳ ರೂಪದಲ್ಲಿ ಟಚ್‌ಸ್ಕ್ರೀನ್ಸ್, ಕೀಬೋರ್ಡ್, ಅಥವಾ ಸ್ಪೀಚ್ ಜನರೇಟಿಂಗ್ ಕಂಪ್ಯೂಟರ್‌ಗಳನ್ನು ಉಪಯೋಗಿಸುವುದು ಇತ್ತೀಚೆಗಿನ ಹೊಸ ಪದ್ಧತಿ. ಆದರೆ ಪಾರ್ಶ್ವವಾಯು ಹಾಗೂ ಮೆದುಳು ಹಾನಿಗೆ ಗುರಿಯಾಗಿ ಪ್ರತಿವರ್ಷ ಸಾವಿರಾರು ಮಂದಿ ಮಾತನಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತಿದ್ದು, ಅವರು ಸಂವಹನಕ್ಕೆ ಹಾತೊರೆಯುತ್ತಿದ್ದಾರೆ. ಅಂಥವರಿಗೆ ಈ ತಾಂತ್ರಿಕ ಸಂಶೋಧನೆ ಅನುಕೂಲಕರ.

'ವ್ಯಕ್ತಿಯ ಮೆದುಳಿನ ಸಂಕೇತಗಳನ್ನು ಸೂಕ್ಷ್ಮವಾಗಿ ಗಮನಿಸಿ ಅದರ ಪೂರ್ಣ ಪದಗಳನ್ನು ನೇರವಾಗಿ ಡಿಕೋಡ್ ಮಾಡಿ ಕಂಪ್ಯೂಟರ್ ಮೂಲಕ ಸಂವಹನ ನಡೆಸಬಹುದು ಎಂಬುದನ್ನು ಈ ಸಂಶೋಧನೆಯು ಕಂಡುಕೊಂಡಿದೆ. ಮೆದುಳಿನ ಸಂದೇಶ ವಾಹಕವನ್ನು ಬಡಿದೆಚ್ಚರಿಸುವ ಮೂಲಕ ಸಂವಹನ ಕ್ರಿಯೆಯನ್ನು ಮರುಸಂಗ್ರಹಿಸಲು ಸಂಶೋಧನೆ ಸಹಾಯಕ' ಎಂದು ಹಿರಿಯ ಲೇಖಕ ಎಡ್ವರ್ಡ್ ಚಾಂಗ್ ತಿಳಿಸಿದ್ದಾರೆ.

'ಈ ಸಾಧನದ ಮೂಲಕ ಉದ್ದೇಶಿತ ಮಾತಿನ ಗ್ರಹಿಕೆಯನ್ನು ಶೇಕಡ 93ರಷ್ಟು ನಿಖರವಾಗಿ ಡಿಕೋಡ್ ಮಾಡಬಹುದು. ಪ್ರಾಯೋಗಿಕ ಪರೀಕ್ಷೆ ವೇಳೆ ಒಂದು ನಿಮಿಷಕ್ಕೆ 18 ಪದಗಳನ್ನು ಡಿಕೋಡ್ ಮಾಡಲಾಗಿದೆ. ಒಂದು ನಿಮಿಷದಲ್ಲಿ 1000 ಪದಗಳನ್ನು ಡಿಕೋಡ್ ಮಾಡುವ ಉದ್ದೇಶವಿದೆ' ಎಂದು ಚಾಂಗ್ ಹೇಳಿದ್ದಾರೆ. ■

ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳಿ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517